ಸರಟಫಿಕೇಟ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ಮೆಂಟಿನವರು ಜವಾಬ್ದಾರ್ಯಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡಿಪ್ಯೂಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಆಂಥಾ ಅಪ್ಪೀಲಿನಲ್ಲಿ ಆಗುವ ಫೈನಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಶೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜಿ ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಜಮೀನು. ಖುಷ್ಕಿ, ತರೀ ಅಥವಾ ಬಾಗಾಯತು.	ಜಮೀನು. ವಿಸ್ತೀರ್ಣ.	ಜಮೀನು. ಆಕಾರ.	ಅಂದಾಜಿ ಕಿಮ್ಮತ್ತು.	ಸರ್ಕಾರಕ್ಕೆ ಸಾಲೀಯಾಗಿ ಕೊಡಬೇಕಾದ ಜೋಡೀ ಯೂ ಕಾಯುಂಗುತ್ತಾ ಮೊಬಲಗು.	ಸರ್ಕಾರಕ್ಕೆ ಬರಬೇಕಾದ ನೋಟೀಸು ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.
ಬೆಂಗಳೂರು	ಯಲಹಂಕ	ಗೊಲ್ಲಹಳ್ಳಿ	ಮಿ॥ ಹಾರ್ಪ್ಸ್‌ಡೆಲ್	(1) ಭೂಮಿಗಳು 9, (2) ಮನೆಗಳು 11, (3) ಜಾನಿ ಜಿರಗಳು 400 ಚಿಕ್ಕದು ಮತ್ತು ದೊಡ್ಡದು.	ರೂ. (1) 3,200 (2) 264 (3) 3,000 ಜುಮ್ಲಾ 6,464	ಜಾರಾ ಗ್ರಾಮ	ಪರಂಪೋಕು	ಎ. ಗು. 145 25	ರೂ. ಆ. 2 0	3,544 Value of the Lands. 6 ಮತ್ತು 11ನೆ ಕಾಲಮಿನ ಜುಮ್ಲಾ ರೂ. 10,008	ರೂ. ಆ. ಪೈ. ... 12 0 0 ... 0 12 0	ರೂ. ಆ. ಪೈ. 18,499 10 9
							ಖುಷ್ಕಿ ...	64 29	51 4			
							ತರಿ ...	12 14	26 0			
							ಬಾಗಾಯತು.	2 30	8 0			
							ಜುಮ್ಲಾ ...	225 18	87 4			

ನೋಟೀಸು.

ತಾರೀಖು 30ನೆ ಜನವರಿ 1909; ಬೆಂಗಳೂರು.

ಚೆನ್ನಪಟ್ಟಣದಲ್ಲಿರುವ 2ನೆ ಕ್ಲಾಸು ಮುನಸಾಫರ ಬಂಗ್ಲೆಗೆ ರಿಪೇರಿ ಮಾಡಬೇಕಾಗಿರುವದ್ದರಿಂದ ಅದರಲ್ಲಿ 1909ನೆ ಇಸವಿ ಫೆಬ್ರವರಿ 1ನೆ ತಾರೀಖು ಲಾಗಾಯಿತು ಮಾರ್ಚಿ ಅಖೈರ ವರಿಗೆ ಯಾರೊಬ್ಬ ಪ್ರಯಾಣೀಕರು ಇಳಿದುಕೊಳ್ಳುವದಕ್ಕೆ ಅವಕಾಶ ವಿರುವದಿಲ್ಲಾ.

ಎಸ್. ವೆಂಕಟರಂಗಂ,
ಫಾರ್ ಡಿಪ್ಯೂಟಿ ಕಮಿಷನರ್.

1908ನೆ ಇಸವಿ ನವೆಂಬರ್ 14ನೆ ತಾರೀಖಿನಲ್ಲಿ ನಡೆದ ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗಿನ ಪ್ರೊಸೀಡಿಂಗ್ಸ್.

ಎಕ್ಸ್ ಅಫಿಷಿಯೋ ಮೆಂಬರುಗಳು.

ಹಾಜರು.

ಬಿ. ಜೆ. ಕೊಮಾರಸಾಮಿನಾಯಿಕ, ಎಸ್ಕ್ವಯರ್, ಪ್ರೆಸಿಡೆಂಟರು.
ಡಿಸ್ಟ್ರಿಕ್ಟ್ ಟ್ರೆಜರಿ ಆಫಿಸರು ಮತ್ತು ವೈಸ್ ಪ್ರೆಸಿಡೆಂಟರು ಮಿ॥ ಎಫ್. ಮಾಥವರಾವ್.
ಬೆಂಗಳೂರು ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರು, ಮಿ॥ ಸಿ. ರಾಮರಾಯರು.
ದೊಡ್ಡ ಬಳ್ಳಾಪುರ ಸಬ್ ಡಿವಿಜ್ ಅಸಿಸ್ಟೆಂಟು ಕಮಿಷನರು, ಮಿ॥ ಎಂ. ಎ. ನಾರಣಯ್ಯಂಗಾರ್ಯವರು.

ಗೈರ್ ಹಾಜರು.

ಕ್ಲೋಸ್‌ಪೇಟೆ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರು, ಮಿ॥ ಟಿ. ಜೋಕ್ಕಣ್ಣನವರು.
ಬೆಂಗಳೂರು ಡಿವಿಜ್ ಎಗ್ಜಿಕ್ಯೂಟಿವ್ ಇಂಜೀನಿಯರವರು, ಮಿ॥ ಕೆ. ಕೃಷ್ಣಯ್ಯಂಗಾರ್ಯವರು.
ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರು ಮಿ॥ ಜಿ. ಎಸ್. ಡೇವಿಡ್‌ರವರು.
ಸ್ಕೂಲ್ ಡೆಪ್ಯೂಟಿ ಇನ್‌ಸ್ಪೆಕ್ಟರು ಮಿ॥ ಕೆ. ಎಸ್. ವೀರಭದ್ರಪ್ಪನವರು.

ನ್ಯಾ ಅಫಿಷಿಯಲ್ ಮೆಂಬರುಗಳು.

ಹಾಜರು.

ಮಿ|| ಚಿಕ್ಕ ಗುರುವಾರೆಡ್ಡಿ.
,, ಜೋಡಿದಾರ್ ಶೀನಪ್ಪನವರು.
,, ಕೋಲೂರು ರಾಮಣ್ಣ.
,, ನರಹರಯ್ಯ.
,, ಶಾಮಯ್ಯ.
,, ರಾಮಚಂದ್ರರಾವ್.
,, ಕರೆಭೀಮಾ ನರಸಿಂಹ ಶೆಟ್ಟಿ.
,, ರಾಮಸಂಜೀವಯ್ಯ.
,, ಧಾಳಪ್ಪ.

ಮಿ|| ಗುಂಡೂರಾವ್.
,, ಸಿ. ಜೆ. ಹಾರ್ಡಿ ಸಾಹೇಬರವರು.
,, ಕೆ. ಸುಬ್ಬಣ್ಣನವರು.
,, ಎಸ್. ದಾಸಪ್ಪನವರು.
,, ಮುಸ್ತ್ಫಾಸಾಬರು.
,, ಪುಟ್ಟಪ್ಪ.
,, ಎ. ರಾಮಣ್ಣ.
,, ಚನ್ನಲಿಂಗಪ್ಪ.

ಗೈರ್‌ಹಾಜರು.

ಯಾರೂ ಇಲ್ಲ

1. ಡಿಸ್ಪೆನ್ಸರಿ ಫಂಡ್ ಬೋರ್ಡಿಗೆ ಸಂಬಂಧಪಟ್ಟ ಫೈನಾನ್ಸು ಕಮಿಟಿ ಏರ್ಪಡಿಸುವ ವಿಚಾರದಲ್ಲಿ.

ಬೋರ್ಡಿನವರು ಏಕಮತ್ಯದಿಂದ ಡಿಸ್ಪೆನ್ಸರಿ ಟ್ರೆಜರಿ ಆಫಿಸರನ್ನು ಮತ್ತು ಮಿ|| ದಾಸಪ್ಪನವರನ್ನು, ಮಿ|| ಕಾಚರಕಹಳ್ಳಿ ಸುಬ್ಬಣ್ಣನವರನ್ನು ಸಹ ಫೈನಾನ್ಸ್ ಕಮಿಟಿ ಮೆಂಬರಾಗಿ ಚುನಾಯಿಸಿರುತ್ತಾರೆ.

2. ಜನರಲ್ ಮತ್ತು ರೆವಿನ್ಯೂ ಡಿಪಾರ್ಟುಮೆಂಟುಗಳ ಸೆಕ್ರೆಟರಿಯವರು ಸ್ಯಾನಿಟೆರಿ ಕಮಿಷನರವರ ಮುಖಾಂತರ ದೇವಿ ಹಾಕಲು ಬಲಾತ್ಕರಿಸುವುದು ಇಷ್ಟವೆ ಎಂಬ ವಿಚಾರದಲ್ಲಿ ರಿಪೋರ್ಟು ಮಾಡಬೇಕೆಂತಲೂ ಹಾಗೆ ಇಷ್ಟವಾಗಿ ಇರುವ ಪಕ್ಷ ಯಾವಯಾವ ಸ್ಥಳದಲ್ಲಿ ಮತ್ತು ಎಷ್ಟು ದಿವಸಗಳ ವರಿವಿಗೆ ಬಲಾತ್ಕರಿಸಬಹುದು ತಿಳಿಸಬೇಕಲ್ಲದೆ ಡಿಸ್ಪೆನ್ಸರಿ ಮತ್ತು ಮ್ಯುನಿಸಿಪಲ್ ಬೋರ್ಡುಗಳ ರೆಜಲ್ಯೂಷ್ಯನ್‌ಗಳು ಕಳುಹಿಸಬೇಕೆಂತ ಬರೆಸಿದ 27-1-08ನೆ ಮರ್ಕುಂ 7346-55—ಮೆಡಿ. 67-07-5ನೆ ನಂಬರು ಡಾಕೆಟ್ ಓದಲಾಯಿತು.

ಈ ಡಿಸ್ಪೆನ್ಸರಿ ತಾಲ್ಲೂಕು ಆಮಳಿ ಎರಡು ಹೋಬಳಿಗಳಲ್ಲಿ ಅಂದರೆ ಕಸಬಾ ಹೋಬಳಿ ಮತ್ತು ಅದರ ಸವಿಾಪದ ಹೋಬಳಿಯಲ್ಲಿ ಹಂಗಾಮಿಯಾಗಿ ಒಂದು ವರುಷದವರವಿಗೆ ದೇವಿ ಹಾಕುವುದು ಬಲಾತ್ಕರಿಸಬಹುದೆಂತ ತೀರ್ಮಾನಮಾಡಲಾಯಿತು.

3. ಆನೇಕಲ್ ತಾಲ್ಲೂಕು ಚಂದಾಪುರಸಂತೆ ವಿಚಾರದಲ್ಲಿ ದಾಮಾಷಾಯಿ ಹುಟ್ಟುವಳಿ ಮತ್ತು ಖರ್ಚಿನ ತಿದ್ದುಪಡಿ ಪ್ರಪೋಜಲ್ ಕಳುಹಿಸಬೇಕೆಂತ ತಲಪಿದ 18-4-08ನೆ ಮರ್ಕುಂ 10367—ಲೋ. ಬೋ. 336-07-2ನೆ ನಂಬರು ಗೌರ್ನಮೆಂಟ್ ಪ್ರೊಸೀಡಿಂಗ್ಸ್ ಓದಲಾಯಿತು.

ಸಂತೆ ಹಾಲಿ ಈಗ ನಡಿಯುತ್ತಿರುವ ಹಿಡುವಳಿ ಜಮ್ಮಿ ಅನುಕೂಲಿಸಿದರೆ ಸರ್ಕಾರಕ್ಕೆ ತೆಗೆದುಕೊಳ್ಳಬೇಕೆಂತಲೂ ಅಥವಾ ಈ ಜವಿಾನಿಗೆ ಸವಿಾಪದಲ್ಲಿರುವ ಗೋಮಾಳ ಜಮ್ಮಿನಲ್ಲಿ ನಡಿಸಬಹುದೆಂತಲೂ ತೀರ್ಮಾನ ಮಾಡಲಾಯಿತು.

4. ಆಸ್ಪತ್ರೆ ಅಸಿಸ್ಟೆಂಟರುಗಳಿಗೂ ಮತ್ತು ಸೂಲಗಿತ್ತಿಯರಿಗೂ ವಾಸಕ್ಕೆ ಕ್ವಾರ್ಟರು (ಮನೆ) ಗಳು ಕಟ್ಟಸಲು ಡಿಸ್ಪೆನ್ಸರಿ ಫಂಡ್ ವ್ಯತ್ತು ಮ್ಯುನಿಸಿಪಲ್ ಬೋರ್ಡುಗಳ ಕಂಟ್ರಿಬ್ಯೂಷ್ಯನ್ ಕೊಡತಕ್ಕ ವಿಚಾರದಲ್ಲಿ ಡಿಟೋ ಬೋರ್ಡುಗಳ ಅಭಿಪ್ರಾಯ ತಿಳಿಸಬೇಕೆಂತ ಜನರಲ್ ಮತ್ತು ರೆವಿನ್ಯೂ ಡಿಪಾರ್ಟುಮೆಂಟುಗಳ ಸೆಕ್ರೆಟರಿ ಸಾಹೇಬರವರಿಂದ ತಲಪಿದ 6-8-08ನೆ ಮರ್ಕುಂ 1327-34—ಮೆಡಿ. 18-07ನೆ ನಂಬರು ಲೆಟರು ಓದಲಾಯಿತು.

ಡಿಸ್ಪೆನ್ಸರಿ ಬೋರ್ಡಿನವರು ಇದಕ್ಕಾಗಿ $\frac{1}{3}$ ಮೂರರಲ್ಲಿ ಒಂದು ಭಾಗ ಕೊಡಬಹುದೆಂತ ತೀರ್ಮಾನ ಮಾಡಲಾಯಿತು.

5. ಪರ್ತೂರಲ್ಲಿ ಅನುಕೂಲವಾಗಿ ಕಟ್ಟಿಡ ಕಟ್ಟುವವರಿಗೂ ವೈಟ್ ಫೀಲ್ಡ್‌ನಲ್ಲಿಯೇ ಡಿಸ್ಪೆನ್ಸರಿ ಇರಬೇಕೆಂತ ತಲಪಿದ 24-8-08ನೆ ಮರ್ಕುಂ 1847-50—ಲೋ. ಬೋ. (165-06) —16ನೆ ನಂಬರು ಗೌರ್ನಮೆಂಟು ಪ್ರೊಸೀಡಿಂಗ್ಸ್ ಓದಲಾಯಿತು.

ರಿಕಾರ್ಡು ಮಾಡಲಾಯಿತು.

6. ಬೆಂಗಳೂರು ತಾಲ್ಲೂಕು ಅಂಜೆಪಾಳ್ಯಕೆ ಕುಡಿಯುವ ನೀರಿನ ನಲ್ಲಿಯನ್ನು ವಿಸ್ತರಿಸುವುದಕ್ಕೆ ತಗಲುವ ಖರ್ಚು ಬೋರ್ಡಿನವರು ವಹಿಸಲು ಒಪ್ಪುತ್ತಾರೆಯೆ ಎಂಬ ವಿಚಾರದಲ್ಲಿ ಬೋರ್ಡಿ ತೀರ್ಮಾನ ಕಳುಹಿಸಬೇಕೆಂತ 3-9-08ನೆ ಮರ್ಕುಂ 2220—ಮ್ಯು. 21-08-7ನೆ ನಂಬರು ಡಾಕೆಟ್ ಜನರಲ್ ಮತ್ತು ರೆವಿನ್ಯೂ ಡಿಪಾರ್ಟುಮೆಂಟುಗಳ ಸೆಕ್ರೆಟರಿ ಸಾಹೇಬರವರಿಂದ ತಲಪಿದ್ದು ಓದಲಾಯಿತು.

ಬೋರ್ಡಿನವರು ಏಕಮತ್ಯವಾಗಿ ಇದಕ್ಕೆ ತಗಲುವ ಖರ್ಚು ಡಿಸ್ಪೆನ್ಸರಿ ಫಂಡಿನಿಂದ ವಹಿಸಬಹುದೆಂತ ತೀರ್ಮಾನ ಮಾಡಲಾಯಿತು.

7. ಆಸ್ಪತ್ರೆ ಅಸಿಸ್ಟೆಂಟರುಗಳು ಅವರಿಗೆ ಅನುಕೂಲವಾದ ಕ್ವಾರ್ಟರುಗಳನ್ನು ಕಟ್ಟಿಸಿ ಕೊಡಿಸುವವರಿಗೂ ಅವರು ಆಸ್ಪತ್ರೆಗಳಿಗೆ ಸೇರಿದ ರೋಗಿಗಳು ಇರತಕ್ಕ ಕೊಠಡಿ (Wards) ಯಲ್ಲಿ ಇರಬಹುದೆಂತ ತಲಪಿದ 11-9-08ನೆ ಮರ್ಕುಂ 2487-500—ಮೆಡಿ. 18-07-3ನೆ ನಂಬರು ಗೌರ್ನಮೆಂಟು ಆರ್ಡರು ಓದಲಾಯಿತು.

ರಿಕಾರ್ಡು ಮಾಡಲಾಯಿತು.

8. ಹಿಂದಿನ ಡಿಸ್ಟ್ರಿಕ್ಟ್ ಬೋರ್ಡು ಮೆಂಬರು ಮಿ॥ ಕೃಷ್ಣಮೂರ್ತಿರಾಯರ ಟ್ರಾವಲಿಂಗ್ ಅಲೋಯೆನ್ಸ್ ವಿಚಾರದಲ್ಲಿ ತಲಪಿದ 16-9-08ನೆ ನಂಕ್ರಂ 2902—ಲೋ. ಬೋ. (60-08)—2ನೆ ನಂಬರು ಗವರ್ನ್‌ಮೆಂಟು ಪ್ರೊಸೀಡಿಂಗ್ಸು ಓದಲಾಯಿತು.

ಈ ಕೃಷ್ಣಮೂರ್ತಿರಾಯರು ಖಾಯಂ ಆಗಿ ಬೆಂಗಳೂರಲ್ಲಿಯೇ ವಾಸವಾಗಿರುವದ್ದರಿಂದ ಮಾಗಡಿಗೆ ತನ್ನ ಸ್ವಂತ ಕೆಲಸಕ್ಕೆ ಆಗಾಗ್ಗೆ ಹೋಗಿ ವಿಾಟಿಂಗಿಗೆ ಹಾಜರಾಗಲು ತಗಲುವ ದಾರಿ ಖರ್ಚು ಕೇಳಲಾಗದೆಂತ ತೀರ್ಮಾನ ಮಾಡಲಾಯಿತು.

9. ಈ ಡಿಸ್ಟ್ರಿಕ್ಟ್ ಉಪಯೋಗಕ್ಕಾಗಿ ಇನ್ನು 2 ಡಜ್ಜ ಆಬಿಸೀನಿಯರ್ ಟ್ಯೂಬ್‌ವೆಲ್ಸ್ ಖರೀದಿಗೆ ತೆಗೆದುಕೊಳ್ಳುವ ವಿಚಾರದಲ್ಲಿ ಜನರಲ್ ಮತ್ತು ರೆವಿನ್ಯೂ ಡಿಪಾರ್ಟುಮೆಂಟುಗಳ ಸೆಕ್ರಿಟರಿ ಸಾಹೇಬರವರಿಂದ ತಲಪಿದ 13-10-08ನೆ ನಂಕ್ರಂ 3513—ಲೋ. ಬೋ. 413-06-8ನೆ ನಂಬರು ಲೆಟರು ಓದಲಾಯಿತು.

ಹಾಲಿ ಈಗ ಕ್ಷಾಮಕಾಲವಾಗಿರುವುದರಿಂದ ಈ ಟ್ಯೂಬು ವೆಲ್ಸುಗಳನ್ನು ಉಪಯೋಗಿಸುವ ಸಂಭವ ಹೆಚ್ಚಾಗಿ ಕಾಣಬರುವುದಿಲ್ಲ. ಆದರೂ ಇವುಗಳನ್ನು ಖರೀದಿಗೆ ತೆಗೆದುಕೊಳ್ಳುವುದಕ್ಕೆ ಮುಂದಿನ ಸಾಲು ಬಜ್ಜೆಟ್ಟಿನಲ್ಲಿ ಪ್ರಾವಿಜ್ಞ ಮಾಡಬೇಕೆಂತ ತೀರ್ಮಾನ ಮಾಡಲಾಯಿತು.

10. ಸೂಲಗಿತ್ತಿಯರಿಗೆ ಟ್ರಾವಲಿಂಗ್ ಅಲೋಯೆನ್ಸ್ ಇಪ್ಪೆ ಕೊಡಬೇಕೆಂತ ಗೌರ್ನಮೆಂಟಿನಲ್ಲಿ ಆರ್ಡರಾಗಿ ತಲಪಿದ 14-10-08ನೆ ನಂಕ್ರಂ 3518-29—ಮೆಡಿ. 297-05ನೆ ನಂಬರು ಪ್ರೊಸೀಡಿಂಗ್ಸು ಓದಲಾಯಿತು.

ರಿಕಾರ್ಡು ಮಾಡಲಾಯಿತು.

11. ಬೆಂಗಳೂರು ಡಿವಿಜ್ಞ ಎಗ್ಜಿಕ್ಯುಟಿವ್ ಇಂಜನೀಯರಿಂದ ಬಿಡದಿ ಸಮೀಪದಲ್ಲಿ ಇರುವ ಕಾಲಗೋಪಹಳ್ಳಿಯಿಂದ ಕಾರ್ಕಾರಹಳ್ಳಿ ತಾಲ್ಲೂಕು ಮುದವಾಡಿಗೆ ಹೋಗುವ ಬಂಡಿರಸ್ತೆ ಇಂಪ್ರೂವ್ ಮಾಡತಕ್ಕ ವಿಚಾರದಲ್ಲಿ ತಲಪಿದ 1-9-08ನೆ ನಂಕ್ರಂ 3667-1155ನೆ ನಂಬರು ಡಾಕೆಟ್ ಓದಲಾಯಿತು.

ಬೋರ್ಡಿನವರು ಅನುಕೂಲ ಪಡಿಸಬೇಕಾಗಿರುವ ಇನ್ನೂ ಇತರ ಮುಖ್ಯವಾದ ಕಾಂಗಾರಿಗಳು ಇರುವ ಪ್ರಯುಕ್ತ ಈ ಕಾಂಗಾರಿಯನ್ನು ಸದ್ಯಕ್ಕೆ ನಿಲ್ಲಿಸಬಹುದೆಂತ ತೀರ್ಮಾನ ಮಾಡಲಾಯಿತು.

12. ಸೀನಿಯರ್ ಸರ್ಜನ್ ಸಾಹೇಬರವರಿಂದ ವೈಟ್ ಫೀಲ್ಡಿನಲ್ಲಿ ಆಸ್ಪತ್ರೆ ಈಟ್ಟಿರುವ ಕಟ್ಟಡಕ್ಕೆ ಬಾಡಿಗೆ 3-0-0 ನಿಂದ 5-0-0ಗೆ ಜಾಸ್ತಿ ಮಾಡಿಸಿಕೊಡಬೇಕೆಂತ ತಲಪಿದ 18-9-08ನೆ ನಂಕ್ರಂ 1536ನೆ ನಂಬರು ಡಾಕೆಟ್ ನೋಡಲಾಯಿತು.

ವತೂರಲ್ಲಿ ಹೊಸದಾಗಿ ಬಂದು ಕಟ್ಟಡ ಕಟ್ಟಿ ಅಲ್ಲಿ ಆಸ್ಪತ್ರೆ ಇಡುವವರಿಗೂ ಹಾಲಿ ಇಟ್ಟಿರುವ ವೈಟ್ ಫೀಲ್ಡಿನ ಕಟ್ಟಡಕ್ಕೆ 3-0-0 ನಿಂದ 5-0-0 ಬಾಡಿಗೆ ಕೊಡುಹುದೆಂತ ತೀರ್ಮಾನ ಮಾಡಲಾಯಿತು.

13. ಕ್ಲೋಸ್ ಪ್ಯಾಟೇಲಿ ಇರುವ ಮುನಿಸಾಫರ್‌ಖಾನೆ ಕಾಂಪೌಂಡ್ ಗೋಡೆ ರಿಪೇರಿ ಮಾಡತಕ್ಕ ವಿಚಾರದಲ್ಲಿ ಮಂಜೂರಾತಿಬಗ್ಗೆ ಕಳುಹಿಸಿದ ಅಂದಾಜು ತಲಪಿದ 27-8-08ನೆ ಮಕ್ರುಂ 124ನೆ ನಂಬರು ಡೆಪ್ಯುಟಿ ಅಮಲ್ದಾರ್‌ರವರ ರಿಪೋರ್ಟು ಓದಲಾಯಿತು.

ಮಂಜೂರ್ಮಾಡಬಹುದೆಂತ ತೀರ್ಮಾನ ಮಾಡಲಾಯಿತು.

14. ವೈಟ್ ಫೀಲ್ಡಿನಲ್ಲಿ ಇರುವ ಸೆಟ್ಲರ್ಸ್ ಉಪಯೋಗಕ್ಕೆ ಅಲ್ಲಿ ಬಂದು ದೊಡ್ಡಿಮನೆ ಕಟ್ಟಿಸಿಕೊಡಬೇಕೆಂತ ಯುರೇಷಿಯರ್ ಮತ್ತು ಆಂಗ್ಲೊ ಇಂಡಿಯರ್ ಅಸೋಸಿಯೇಷನ್ ಆನರರಿ ಸೆಕ್ರಿಟರಿಯವರಿಂದ ತಲಪಿದ 16-6-08ನೆ ನಂಕ್ರಂ 22ನೆ ನಂಬರು ಲೆಟರ್ ಓದಲಾಯಿತು.

ವೈಟ್ ಫೀಲ್ಡಿನಲ್ಲಿ ಸೆಟ್ಲರ್ಸ್ ಉಪಯೋಗಕ್ಕೆ ಬಂದು ದೊಡ್ಡಿ ಮನೆ ಕಟ್ಟಲು ಸ್ಯಾಂಕ್ಷನ್ ಮಾಡಲಾಯಿತು.

15. ಕಾರ್ಕಾರಹಳ್ಳಿ ಟ್ರಾವಲರ್ಸ್ ಬಂಗ್ಲೆ ಮತ್ತು ಮುನಿಸಾಫರ್‌ಖಾನೆ ಜವಾನರುಗಳಿಗೆ ಬಂದೊಂದು ರೂಪಾಯಿ ಬಡ್ತಿ ಕೊಡಿಸಲು ಶಿಫಾರಸು ಮಾಡಿದ ಕ್ಲೋಸ್‌ಪೇಟೆ ಡಿವಿಜ್ಞ ಆಫಿಸರವರ 4-8-08ನೆ ನಂಕ್ರಂ 161ನೆ ನಂಬರು ಯಾದಿ ಓದಲಾಯಿತು.

ಬಂಗ್ಲೋ ಮತ್ತು ಮುನಿಸಾಫರ್‌ಖಾನೆ ಜವಾನರುಗಳಿಗೆ 5 ರೂಪಾಯಿ ಸಂಬಳದಮೇಲೆ ಮೊಕರೂರು ಮಾಡಿದ್ದಾಗ್ಗಿಂತ ಈಚಿಗೆ ಪದಾರ್ಥಗಳ ಖರೀದಿ ಬಹಳ ಜಾಸ್ತಿಯಾಗಿರುವುದರಿಂದ ಎಲ್ಲಾ 3ನೆ ಕ್ಲಾಸ್ ಬಂಗ್ಲೋ ಮತ್ತು ಮುನಿಸಾಫರ್‌ಖಾನೆ ಜವಾನರುಗಳಿಗೆ ಬಂದೇನವಾಗಿ ಇರುವಹಾಗೆ ಹಾಲಿ ಇರುವ 5 ರೂಪಾಯಿ ತಲಬಿನಿಂದ 6 ರೂಪಾಯಿಗೆ ಬಡ್ತಿ ಮಾಡಲು ಶಿಫಾರ್ಸು ಮಾಡಬೇಕೆಂತ ತೀರ್ಮಾನ ಮಾಡಲಾಯಿತು.

16. ಅರ್ಧ ಖರೀದಿಗೆ ಬೀಜದ ಹೋರಿಯನ್ನು ಪಾಪಣ್ಣನಿಗೆ ಕೊಡಿಸಬೇಕೆಂತ ಶಿಫಾರ್ಸು ಮಾಡಿ ಬೆಂಗಳೂರು ಸಬ್ ಡಿವಿಜ್ಞ ಅಸಿಸ್ಟೆಂಟ್ ಕಮಿಷನರವರು ಬರೆದ 14—9—08ನೆ ನಂಕ್ರಂ 194ನೆ ನಂಬರು ಯಾದಿ ಓದಲಾಯಿತು.

ಈತನಿಗೆ ಅರ್ಧ ಖರೀದಿಗೆ ಬಂದು ಬೀಜದ ಹೋರಿ ಕೊಡಿಸಬೇಕೆಂತ ಗವರ್ನ್‌ಮೆಂಟಿಗೆ ಶಿಫಾರಸು ಮಾಡಬೇಕೆಂತ ತೀರ್ಮಾನ ಮಾಡಲಾಯಿತು.

17. ಹೂಡಿ, ಗುರುವಾರಡ್ಡಿಗೆ ಬಂದು ಬೀಜದ ಹೋರಿ ಅರ್ಧ ಖರೀದಿಗೆ ಕೊಡಿಸಲು ಶಿಫಾರಸು ಮಾಡಿ ಬೆಂಗಳೂರು ಸಬ್ ಡಿವಿಜ್ಞ ಅಸಿಸ್ಟೆಂಟ್ ಕಮಿಷನರವರು ಬರೆದ 14-9--08ನೆ ನಂಕ್ರಂ 199ನೆ ನಂಬರು ಯಾದಿ ಓದಲಾಯಿತು.

ಸಬ್‌ಜಕ್ಟು ನಂಬರು 16ರಲ್ಲಿ 16ರಲ್ಲಿ ತೀರ್ಮಾನವಾಗಿರುವುದನ್ನೆ ಇದಕ್ಕೂ ಅನ್ವಯಿಸಿಕೊಳ್ಳಬೇಕೆಂತ ತೀರ್ಮಾನವಾಯಿತು.

18. ಬೋರ್ಡಿನವರ ಮಂಜೂರಾತಿಬಗ್ಗೆ ಡಿಸ್ಟ್ರಿಕ್ಟ್ ಫಂಡ್ ಬಜ್ಜೆಟ್ ಕಾವುಗಾರಿಗಳ ಅಂದಾಜಾಗಳು ಓದಲಾಯಿತು.

ಮಂಜೂರ್ಮಾಡಲಾಯಿತು.

19. ಘಾಟ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನಕ್ಕೆ ಹೋಗುವ ರೋಡು ರಿಪೇರಿ ವಿಚಾರದಲ್ಲಿ ತಲಪಿದ 20-2-08ನೆ ಮಕ್ರುಂ 8317-9—ಲೋ. ಬೋ. 228-06-6ನೆ ನಂಬರು ಗವರ್ನಮೆಂಟ್ ಪ್ರೊಸೀಡಿಂಗ್ಸು ಓದಲಾಯಿತು.

ಈರೋಡು ರಿಪೇರಿಯನ್ನು ಮುಜರಾಯಿ ಫಂಡಿನಿಂದ ಮುಜರಾಯಿ ಡಿಪಾರ್ಟ್‌ಮೆಂಟಿನವರು ಮಾಡಿಕೊಳ್ಳತಕ್ಕದ್ದೆಂದು ತೀರ್ಮಾನ ಮಾಡಲಾಯಿತು.

20. ಪಶುವೈದ್ಯ ಸಂಬಂಧವಾದ ಆಸ್ಪತ್ರೆಗಳ ಸ್ಥಾಪನೆ ಛಾರ್ಜು 1908-09ನೆ ಸಾಲಿನದು ಎಷ್ಟೆಷ್ಟು ಭಾಗ ಡಿಸ್ಟ್ರಿಕ್ಟು ಫಂಡಿನಿಂದಲೂ ಮ್ಯುನಿಸಿಪಲ್ ಫಂಡಿನಿಂದಲೂ ವಹಿಸಬೇಕೆಂಬುವ ವಿಚಾರದಲ್ಲಿ ಆಯಾಯ ಬೋರ್ಡಿನಲ್ಲಿ ಯೋಚಿಸಬೇಕೆಂತಲೂ ಮತ್ತು ಹಾಲಿ ಸಾಲಿಗೆ ಮಂಜೂರಾಗಿರುವ ಬಜ್ಜೆಟ್ಟು ಯಾವ ಘಟಂನಲ್ಲಿ ಇದನ್ನು ವಹಿಸಬೇಕೆಂಬುವದನ್ನು ತೋರಿಸಬೇಕೆಂತ ಜನರಲ್ ಮತ್ತು ರೆವಿನ್ಯೂ ಡಿಪಾರ್ಟುಮೆಂಟುಗಳ ಸೆಕ್ರಿಟರಿ ಸಾ॥ ರವರಿಂದ ತಲಪಿದ 25-7-08ನೆ ಮಕ್ರುಂ 888-95—ಲೋ. ಬೋ 455-07-3ನೆ ನಂಬರು ಡಾಕೆಟ್ ಓದಲಾಯಿತು.

ಡಿಸ್ಟ್ರಿಕ್ಟು ಫಂಡಿನಿಂದ ಮೂರರಲ್ಲಿ ಒಂದುಭಾಗ ವಹಿಸಬಹುದೆಂತಲೂ ಈ ಮೊಬಲಗು ಹಾಲಿ ನಡಿಯುವ ವರುಷದ ಬಜ್ಜೆಟ್ಟಿನಲ್ಲಿ ಸೆಂಟ್ ಮಾರ್ತಾಸ್ ಆಸ್ಪತ್ರೆಗೆ ಕಂಟ್ರಿಬ್ಯೂಷ್ಯ ಕೊಡಲು ಮಂಜೂರಾಗಿರುವ ಮೊಬಲಗಿನಿಂದ ಖರ್ಚು ಬೀಳಬಹುದೆಂತಲೂ ತೀರ್ಮಾನ ಮಾಡಲಾಯಿತು.

21. ಸಂಪಿಂಗ್ ಸ್ಪೇಷ್ ಉಪಯೋಗಕ್ಕಾಗಿ ಚಿಕ್ಕ ಬಾಣಾವರದಲ್ಲಿ ಬಂದು ದೊಡ್ಡಮನೆ ಸ್ಥಾಪಿಸಬೇಕೆಂತ ವಾಟರ್ ಸಪ್ಲೈ ಮತ್ತು ಸ್ಯೂವರ್ ಡಿವಿಜ್ ಎಗ್ಜಿಕ್ಯೂಟೀವ್ ಇಂಜನಿಯರು ಬರೆಸಿದ 9—10-5-08ನೆ ಮಕ್ರುಂ 1121ನೆ ಮೆನೊ ಓದಲಾಯಿತು.

ಚಿಕ್ಕ ಬಾಣಾವರದಲ್ಲಿ ಬಂದು ದೊಡ್ಡಮನೆ ಸ್ಥಾಪಿಸಬಹುದೆಂತ ತೀರ್ಮಾನ ಮಾಡಲಾಯಿತು.

22. ಕೃಷ್ಣರಾಜಪುರ-ವೈಟ್‌ಫೀಲ್ಡ್ ರೋಡು ರಿಪೇರಿ ವಿಚಾರದಲ್ಲಿ ಬೆಂಗಳೂರು ಸಬ್ ಡಿವಿಜ್ ಅಸಿಸ್ಟೆಂಟು ಕಮಿಷನರವರಿಂದ ತಲಪಿದ 16-10-08ನೆ ಮಕ್ರುಂ 334ನೆ ನಂಬರು ಯಾದಿ ಓದಲಾಯಿತು.

ಮುಂದಿನಸಾಲ್ ಬಜ್ಜೆಟ್ಟು ಕಾಲದಲ್ಲಿ ಇದನ್ನು ಯೋಚಿಸಬಹುದೆಂತ ತೀರ್ಮಾನ ಮಾಡಲಾಯಿತು.

23. ದೊಡ್ಡಬಳ್ಳಾಪುರ ತಾಲ್ಲೂಕು ತೂಬುಗೆರೇಲಿ ತಿರುಗಿ ಸಂತೆ ಮಾಡತಕ್ಕ ವಿಚಾರದಲ್ಲಿ ದೊಡ್ಡಬಳ್ಳಾಪುರ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರವರು ಬರೆಸಿದ 17-10-08ನೆ ಮಕ್ರುಂ 468ನೆ ನಂಬರು ಯಾದಿ ಓದಲಾಯಿತು.

ತೂಬುಗೆರೇಲಿ ಪುನಃ ಸಂತೆ ನಡಿಸಬಹುದೆಂತ ತೀರ್ಮಾನ ಮಾಡಲಾಯಿತು.

24. ನೆಲಮಂಗಲ ತಾಲ್ಲೂಕು ಸೊಂಡೇಕೊಪ್ಪ ಮತ್ತು ದೊಡ್ಡಬೆಲೆ ಯೂನಿರ್ಯಗಳ ಮನೆ 1907-08ನೆ ಸಾಲಿನ ಕಂದಾಯ ಮಾಫ಼ಿ ಮಾಡಲು ಶಿಫಾರಸು ಮಾಡಿ ದೊಡ್ಡಬಳ್ಳಾಪುರ ಸಬ್ ಡಿವೀಜ್ ಅಸಿಸ್ಟೆಂಟ್ ಕಮಿಷನರವರು ಬರೆಸಿದ 8-9-08ನೆ ಮಕ್ರುಂ 321 ಮತ್ತು 322ನೆ ನಂಬರು ಮೆಮೋಗಳು ಓದಲಾದವು.

ಈ ಯೂನಿರ್ಯಗಳಲ್ಲಿ 1907-08ನೆ ಸಾಲಿನ ಕಂದಾಯ ಮಾಫ಼ಿ ಮಾಡತಕ್ಕ ವಿಚಾರದಲ್ಲಿ ತಕ್ಕಷ್ಟು ಕಾರಣಗಳು ಇಲ್ಲವಾಗಿ ಮಾಫ಼ಿ ಮಾಡಲಾಗಲಾರದೆಂತ ತೀರ್ಮಾನ ಮಾಡಲಾಯಿತು.

25. ಹೆಸರುಘಟ್ಟ ಗ್ಯಾಸ್ ಫಾರಂನಲ್ಲಿ 4 ದೊಡ್ಡಿ ಮನೆಗಳನ್ನು ಕಟ್ಟಿಸುವ ವಿಚಾರದಲ್ಲಿ ಬೆಂಗಳೂರು ತಾಲ್ಲೂಕು ಅಮಲ್ದಾರ್ರವರಿಂದ ತಲಪಿದ 5-11-08ನೆ ಮಕ್ರುಂ 56ನೆ ನಂಬರು ಇತ್ತಿಲ್ಲಿ ಓದಲಾಯಿತು.

ಹೆಸರುಘಟ್ಟ ಗ್ಯಾಸ್ ಫಾರಂನಲ್ಲಿ 2 ದೊಡ್ಡಿ ಮನೆಗಳನ್ನು ಕಟ್ಟಿಸಬೇಕೆಂತ ತೀರ್ಮಾನ ಮಾಡಲಾಯಿತು.

ಮುಂದಿನ ಮಿಟಿಂಗ್ 1909ನೆ ಇಸವಿ ಫೆಬ್ರವರಿ 15ಕ್ಕೆ ನಡಿಯಬೇಕೆಂತ ತೀರ್ಮಾನ ಮಾಡಲಾಯಿತು.

1908ನೆ ನವಂಬರು ತಿಂಗಳಲ್ಲಿ ಬೋರ್ಡಿನವರು ಸ್ಯಾಂಕ್ಷ್ಷ್ ಮಾಡಿದ ಬಜ್ಜೆಟ್ಟಿನಲ್ಲಿ ಮಂಜೂರಾಗಿರುವ ಕಾಂಗಾರಿಗಳ ಅಂದಾಜಾಗಳು :—

		ರೂ.
1.	ಮಾಗಡೀ ತಾಲ್ಲೂಕು ಕೊಂಡಹಳ್ಳೀಲಿ ಬಂದು ತೀನೀರುಭಾವಿ ತೆಗಿಸುವುದು ...	300
2.	ಮಾಗಡೀ ತಾಲ್ಲೂಕು ತಿರುಮಲೆಬಳಿ ಇರುವ ಸೋಮನಕಟ್ಟೀಲಿ ಹೂಳು ತೆಗಿಸಲು ...	50
3.	ಡಿಟೋ ತಾಲ್ಲೂಕು ಚಕ್ಕಭಾವೀಲಿ ಬಂದು ಭಾವಿ ತೆಗಿಸುವುದು ...	300
4.	ನೆಲಮಂಗಲ ತಾಲ್ಲೂಕು ಹೊನ್ನಸಂದ್ರದಲ್ಲಿ ಬಂದು ಭಾವಿ ತೆಗಿಸುವುದು ..	227
5.	ಬೆಂಗಳೂರು ತಾಲ್ಲೂಕು ಕಾಕೋಳು ಚಾವಡಿ ರಿಪೇರಿ ಮಾಡಲು	13
6.	ಡಿಟೋ ಬ್ಯಾತಾ ಚಾವಡಿ ರಿಪೇರಿ ಮಾಡಲು ...	12
7.	ಬೆಂಗಳೂರು ತಾಲ್ಲೂಕು ಯಲಹಂಕದ ಯೂನಿರ್ಯನಲ್ಲಿ ಚರಂಡಿಗಳು ರಿಪೇರಿ ಮಾಡುವದು ಮತ್ತು ಹೊಸದಾಗಿ ಕಟ್ಟಲು ವಗೈರೆಗೆ	350
8.	ಬೆಂಗಳೂರು ತಾಲ್ಲೂಕು ಕೆಂಗೇರಿ ಯೂನಿರ್ಯನಲ್ಲಿ ರೋಡುಗಳ ರಿಪೇರಿಬಗ್ಯೂ ಮತ್ತು ವಿ. ತರಹಾ (V.-shaped) ಚರಂಡಿ ಮಾಡಲು	250
9.	ಬೆಂಗಳೂರು ತಾಲ್ಲೂಕು ಯಶವಂತಪುರದಲ್ಲಿ ಬಂದು ದೊಡ್ಡಿಮನೆ ಕಟ್ಟುವುದು ..	350
10.	ಡಿಟೋ ಅಬ್ಬಿಗಾನಹಳ್ಳೀಲಿರುವ ದೊಡ್ಡಿಮನೆ ರಿಪೇರಿ ಮಾಡಲು ..	25
11.	ಡಿಟೋ ತಾಲ್ಲೂಕು ರಾಜಾನುಕುಂಟೆ-ಕಾಕೋಳು ರಸ್ತೆ ರಿಪೇರಿ ಮಾಡುವುದು ..	200
12.	ಬೆಂಗಳೂರು ತಾಲ್ಲೂಕು ಬೇಗೂರು ಯೂನಿರ್ಯನಲ್ಲಿ ರೋಡು ಮಾಡುವುದಕ್ಕೂ ಮತ್ತು ಇಂಪ್ರೂವ್ ಮಾಡುವುದಕ್ಕೂ ಸಹ	100

ಗೌರ್ನಮೆಂಟಿನವರು 20-6-08ನೆ ಮಕ್ರುಂ 13337-5—ಲೋ. ಬೋ. 307-07-19ನೆ ನಂಬರು ಪ್ರೊಸೀಡಿಂಗ್ಸಿನಲ್ಲಿ ಲೋಕಲ್ ಫಂಡ್ ಜನರಲ್‌ನಿಂದ ಮಂಜೂರ್ಮಾಡಿದ (ಬಜ್ಜೆಟ್) ಕಾಂಗಾರಿಗಳು :—

1.	ನೆಲಮಂಗಲ ತಾಲ್ಲೂಕು ಬರಗೂರಲ್ಲಿ ಬಂದು ಭಾವಿ ತೆಗಿಸಲು ..	250
2.	ದೊಡ್ಡಬಳ್ಳಾಪುರ ತಾಲ್ಲೂಕು ಬೀಡಿಕೆರೇಲಿ ಬಂದು ಭಾವಿ ತೆಗಿಸಲು ...	267
3.	ಬೆಂಗಳೂರು ತಾಲ್ಲೂಕು ನಾರಕ್ಕಿರಸ್ತೇಲಿ ಒಂದು ಚಿಕ್ಕ ಸೇತುವೆ ಕಟ್ಟುವುದಕ್ಕೆ ...	120
4.	ಸೊಣ್ಣೇನಹಳ್ಳೀಲಿ ದೊಡ್ಡಿಮನೆ ರಿಪೇರಿ ಮಾಡಲು ...	30

ಗೌರ್ನಮೆಂಟಿನವರು 31-10-08ನೆ ಮಕ್ರುಂ 2541-51—ಅಗ್ರಿ. 69-08-3ನೆ ನಂಬರು ಪ್ರೊಸೀಡಿಂಗ್ಸಿನಲ್ಲಿ ಮಂಜೂರ್ಮಾಡಿದ (ಸ್ಪೆಷಲ್ ಗ್ರಾಂಟ್) ಕಾಂಗಾರಿಗಳು.

1.	ದೊಡ್ಡಬಳ್ಳಾಪುರ ಮ್ಯುನಿಸಿಪಾಲಿಟಿಯಲ್ಲಿ ಕೇಪಮ್ಮನ ಭಾವಿ ಇಳಿಸಲು ...	304
2.	ಡಿಟೋ ಮ್ಯುನಿಸಿಪಾಲಿಟಿಯಲ್ಲಿ ಹೊಲೆಯರ ಭಾವಿ ಇಳಿಸಲು ...	284

ಬಿ. ಜೆ. ಕೊಮಾರಸಾಮಿನಾಯಿಕ್, ಪ್ರೆಸಿಡೆಂಟ್.